ಕ್ರೀಡಾ ತರಬೇತಿದಾರರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಕ್ರೀಡಾ ತರಬೇತುದಾರರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ರಾಮನಗರ, ಯಾದಗಿರಿ, ಬಾಗಲಕೋಟೆ, ಚಿಕ್ಕಬಳ್ಳಾಪುರ, ಹಾವೇರಿ, ಬೆಳಗಾವಿ ಜಿಲ್ಲೆಯ ಕ್ರೀಡಾವಸತಿ ನಿಲಯದ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ನ. 30 ಕೊನೆಯ ದಿನ. ಅರ್ಹರು ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಛಥಛಿಶ.ಒಚ್ಞ.ಚಿಠಿಬ್ಚಿಚ.ಜಟಿಡ.ಜ್ಞಿ ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಾಕಿ, ಅಥ್ಲೆಟಿಕ್ಸ್, ಫುಟ್ಬಾಲ್, ಕುಸ್ತಿ (ಮಹಿಳೆ) ವಿಭಾಗದಲ್ಲಿ ಒಟ್ಟು ಆರು ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ಪದವಿ ಮತ್ತು ರಾಷ್ಟ್ರೀಯ ಕ್ರೀಡಾ ಶಿಕ್ಷಣ/ ಭಾರತೀಯ ಕ್ರೀಡಾ ಪ್ರಾಧಿಕಾರದ ಸಂಸ್ಥೆಯಿಂದ ಆಯಾ ಕ್ರೀಡೆಯಲ್ಲಿ ಒಂದು ವರ್ಷದ ಡಿಪ್ಲೊಮಾ, ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಪಡೆದವರು/ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದವರು ಅರ್ಜಿ ಸಲ್ಲಿಸಲು ಅರ್ಹರು.

ನೆಕ್ಸ್ಟ್‌ವೆಲ್ತ್ ಆಂತ್ರಪ್ರೆನ್ಯೂರ್ಸ್ ಕಂಪನಿ ಸಂಸ್ಥಾಪಕ ಡಾ.ಶ್ರೀಧರ್ ಮಿಟ್ಟ

ಉದ್ಯೋಗದಲ್ಲಿ ಮಹಿಳೆಯರಿಗೆ ಉತ್ತೇಜನ ಅಗತ್ಯ



ಬೆಂಗಳೂರು: ಭಾರತದಲ್ಲಿ ಉದ್ಯಮಗಳನ್ನು ಯಶಸ್ವಿಯಾಗಿ ಕಟ್ಟಬೇಕೆಂದರೆ ಉದಾಸೀನಕ್ಕೆ ಈಡಾಗಿರುವ ಮಹಿಳೆಯರಿಗೆ ಹೆಚ್ಚು ಉತ್ತೇಜನ ಕೊಡುವುದನ್ನು ಆದ್ಯತೆಯಾಗಿ ರೂಢಿಸಿಕೊಳ್ಳಬೇಕು. ಇದು ತನ್ನಿಂತಾನೇ ಸಾಮಾಜಿಕ ಬದಲಾವಣೆಯನ್ನೂ ತರುತ್ತದೆ. ಎಂದು ನೆಕ್ಸ್ಟ್‌ವೆಲ್ತ್ ಆಂತ್ರಪ್ರೆನ್ಯೂರ್ಸ್ ಕಂಪನಿಯ ಸಂಸ್ಥಾಪಕ ಡಾ.ಶ್ರೀಧರ್ ಮಿಟ್ಟ ಹೇಳಿದ್ದಾರೆ.

ತಂತ್ರಜ್ಞಾನ ಸಮಾವೇಶದಲ್ಲಿ ಶುಕ್ರವಾರ 'ಭಾರತದಲ್ಲಿ ಯಶಸ್ವಿ ಉದ್ಯಮಗಳನ್ನು ಕಟ್ಟಲು ಅನುಸರಿಸಬೇಕಾದ ಮಂತ್ರಗಳು' ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿ, ದೇಶದ ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧದಷ್ಟಿದ್ದಾರೆ. ಉದ್ಯೋಗಿಗಳ ನೇಮಕಾತಿ ಸಂದರ್ಭದಲ್ಲಿ ಇವರಿಗೆ ಹೆಚ್ಚು ಒತ್ತು ಕೊಡಬೇಕು ಇವರ ಪ್ರತಿಭೆಯನ್ನು ದೇಶದ ಆರ್ಥಿಕ ಬೆಳವಣಿಗೆಗೆ ನಿರ್ಣಾಯಕವಾಗಿ ಬಳಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

> ಉದ್ಯಮ ಯಶಸ್ವಿಯಾಗಬೇಕಾದರೆ ಸರಿಯಾದ ವಿತರಣಾ ಜಾಲ, ಉದ್ಯಮಶೀಲ ವ್ಯಕ್ತಿಗಳೊಂದಿಗೆ ಸಂವಾದ, ಉದ್ಯೋಗ ಮತ್ತು ಉದ್ಯೋಗಿಗಳ ಸರಿಯಾದ ನಿಯೋಜನೆ ಮತ್ತು ಆಡಳಿತ ನಿರ್ವಹಣೆಯಲ್ಲಿ ಅಚ್ಚುಕಟ್ಟುತನಗಳು ಬಹಳ ಮುಖ್ಯವಾಗುತ್ತವೆ. ನವಭಾರತದ ನಿರ್ಮಾಣದಲ್ಲಿ ಇಂತಹ ಸಂಸ್ಕೃತಿ ಮೂಡಿಬರಬೇಕು ಎಂದು ತಿಳಿಸಿದರು.
>
> - ಡಾ.ಶ್ರೀಧರ್ ಮಿಟ್ಟ, ನೆಕ್ಸ್ಟ್‌ವೆಲ್ತ್ ಆಂತ್ರಪ್ರೆನ್ಯೂರ್ಸ್ ಕಂಪನಿ ಸಂಸ್ಥಾಪಕ

ದೇಶದಲ್ಲಿ ಬೃಹತ್ ಮಾರುಕಟ್ಟೆ, ನಾವೀನ್ಯತೆ ಮತ್ತು ಉದ್ಯಮಶೀಲತೆಗಳು ಮುಕ್ತವಾಗಿವೆ. ಕಾಲೇಜುಗಳಿಂದ ಹೊರಬರುವ ಪದವೀಧರ ಯುವಜನರಿಗೆ ನಾವು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲೇಬೇಕಾದ ಅನಿವಾರ್ಯತೆ ಇದೆ. ಜೊತೆಗೆ, ದೊಡ್ಡ ನಗರಗಳ ಬದಲು ಗ್ರಾಮಾಂತರ ಪ್ರದೇಶದಲ್ಲಿ ಇದನ್ನು ಸಾಧ್ಯವಾಗಿಸಬೇಕು. ಇದರಿಂದ ಆರ್ಥಿಕ ಪ್ರಗತಿಗೆ ಒಂದು ಪರಿಪೂರ್ಣತೆ ಒದಗಿ ಬರುತ್ತದೆ ಎಂದು ಅವರು ಅಂಕಿಅಂಶಗಳ ಸಮೇತ ಅಭಿಪ್ರಾಯಪಟ್ಟರು.

ಉದ್ಯಮಿಗಳಾದ ಸಿ ಎಂ ಪಾಟೀಲ್, ಎಸ್.ಜಿ. ಅನಿಲ್‌ಕುಮಾರ್, ಜಿತೇಶ್ ಅರೋರಾ, ಪ್ರಣೀತ್ ಕುಮಾರ್ ಮತ್ತು ರವಿ ಹಳದೀಪುರ್ ಕೂಡ ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಟಿಟಿಡಿ ಆಡಳಿತ ಮಂಡಳಿ ಸದಸ್ಯ ಎಸ್.ಆರ್.ವಿಶ್ವನಾಥ್ ತಮ್ಮ ಕುಟುಂಬ ಸದ್ಯರೊಂದಿಗೆ ಶುಕ್ರವಾರ ತಿರುಮಲ ತಿರುಪತಿ ತಿಮ್ಮಪ್ಪನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಸಮಾಚಾರ ಸಣ್ಣದಲ್ಲ

ಗೀತಾ ಶಂಕರ್ ಪಿಆರ್‌ಸಿಐ ಅಧ್ಯಕ್ಷೆ

ಬೆಂಗಳೂರು: ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾದ (ಪಿಆರ್‌ಸಿಐ) ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ಗೀತಾ ಶಂಕರ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಕೋಲ್ಕತಾದಲ್ಲಿ ನಡೆದ ಪಿಆರ್‌ಸಿಐ ಆಡಳಿತ ಮಂಡಳಿ ಸಭೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾಗಿರುವ ಬೆಂಗಳೂರಿನ ಸಂವಹನ, ಅನುಭೂತಿ ಕಲಿಕೆ ಮತ್ತು ಅಭಿವೃದ್ಧಿ ಸಲಹೆಗಾರರಾದ ಗೀತಾ ಶಂಕರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಪಿಆರ್‌ಐಸಿ ಎಂಬುದು ರಾಜಕೀಯೇತರ ಪಾನ್ ಇಂಡಿಯಾ ಸಂಸ್ಥೆಯಾಗಿದ್ದು, ಸಂವಹನ, ಪಬ್ಲಿಕ್ ರಿಲೇಷನ್ಸ್, ಜಾಹೀರಾತು, ಎಚ್‌ಆರ್, ಶೈಕ್ಷಣಿಕ, ಪತ್ರಿಕೋದ್ಯಮ ಮತ್ತು ಇತರ ಸಂಬಂಧಿತ ಸೇವೆಗಳನ್ನು ನೀಡುತ್ತಿದೆ. ಪಿಆರ್‌ಸಿಐನ ಮಾರ್ಗದರ್ಶಕ ಎಂ.ಬಿ.ಜಯರಾಮ್ ಮತ್ತಿತರರು ಇದ್ದರು.

ದಂಪತಿಯ ಪುಸ್ತಕ ಬಿಡುಗಡೆ ಇಂದು

ಬೆಂಗಳೂರು: ನಗರದ ಯಕ್ಷ ಸಾಹಿತ್ಯ ವೇದಿಕೆ ಪುಸ್ತಕ ಬಿಡುಗಡೆಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುತ್ತಿದೆ. ಒಂದೇ ವೇದಿಕೆಯಲ್ಲಿ ರವಿ ಮಡೋಡಿ ಮತ್ತು ಪೂರ್ಣಿಮಾ ಹೆಗಡೆ ದಂಪತಿ ರಚಿಸಿದ ಎರಡು ಕೃತಿಗಳನ್ನು ಬಿಡುಗಡೆ ಮಾಡುತ್ತಿದೆ. ಮಡಿಲು ಪ್ರಕಾಶನ ಹೊರತಂದಿರುವ ರವಿ ಮಡೋಡಿ ಅವರ ನಮ್ಮಲ್ಲೇ ಮೊದಲು ಹಾಗೂ ಸಾಹಿತ್ಯ ಲೋಕ ಪಬ್ಲಿಕೇಷನ್ ಹೊರತಂದಿರುವ ಪೂರ್ಣಿಮಾ ಹೆಗಡೆ ಅವರ ಅಂತರ್ವೀಕ್ಷಣೆ ಕೃತಿಗಳು ಶನಿವಾರ ಸಂಜೆ 5 ಗಂಟೆಗೆ ಬಸವನಗುಡಿ ನ್ಯಾಷನಲ್ ಕಾಲೇಜು ಆವರಣದ ಎಚ್.ಎನ್.ಮಲ್ಟಿಮೀಡಿಯಾ ಹಾಲ್‌ನಲ್ಲಿ ಲೋಕಾರ್ಪಣೆಗೊಳ್ಳಲಿದೆ. ಕವಿ, ಸಾಹಿತಿ ಬಿ.ಆರ್.ಲಕ್ಷ್ಮಣರಾವ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗಿರೀಶ್ ಹತ್ವಾರ್ (ಜೋಗಿ) ಕೃತಿಗಳನ್ನು ಬಿಡುಗಡೆ ಮಾಡುವರು. ಯಕ್ಷಗಾನ ವಿದ್ವಾಂಸ ಡಾ.ಆನಂದರಾಮ ಉಪಾಧ್ಯ, ಸಾಹಿತಿ ಭಾರತಿ ಹೆಗಡೆ ಕೃತಿಗಳ ಕುರಿತು ಮಾತನಾಡುವರು. ಬಳಿಕ ಬೆಂಗಳೂರಿನ ಯಕ್ಷಕಲಾ ಅಕಾಡೆಮಿಯ ಬಾಲ ಕಲಾವಿದರಿಂದ ವೀರ ವೃಷಸೇನ ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಸಿಜೆಯಿಂದ ತನಿಖೆಯಾಗಲಿ

ಬೆಂಗಳೂರು: ಚಿಲುಮೆ ಸಂಸ್ಥೆ ನಡೆಸಿರುವ ಮತದಾರರ ಪಟ್ಟಿ ಪರಿಷ್ಕರಣೆ ಅಕ್ರಮವನ್ನು ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗಳ ನೇತೃತ್ವದಲ್ಲಿಯೇ ತನಿಖೆಗೊಳಪಡಿಸಬೇಕು ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಆಪರೇಷನ್ ಮತದಾರರ ಪಟ್ಟಿ ಪರಿಷ್ಕರಣೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಗಂಭೀರ ಅಪರಾಧದ ಪ್ರಕರಣ. ಈ ಬಗ್ಗೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಯವರ ಉಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆ ಮಾಡಬೇಕು ಎಂದು ಒತ್ತಾಯಿಸಿದರು. ಚಿಲುಮೆ ಸಂಸ್ಥೆಗೆ ಮೈತ್ರಿ ಸರಕಾರ ಇದ್ದಾಗಲೇ ಅನುಮತಿ ಕೊಟ್ಟಿದ್ದಾರೆ ಎನ್ನುವ ಬಿಜೆಪಿಯವರು, ಯಾವಾ ಗಲೂ ಇವರ ಕಾಲದಲ್ಲಿ ಇತ್ತು ಎಂದು ಕೇಳುತ್ತಾರೆ. ಒಂದು ಸಂಸ್ಥೆ ದುಡ್ಡು ಇಲ್ಲದೆ ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ. ಅದಕ್ಕೆ ಜಾಹೀರಾತು ಕೊಡದೇ ಅವರಿಗೆ ಕೊಟ್ಟಿದ್ದಾರೆ. ಅವರು ಬಿಎಲ್‌ಒಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿಗಳು ಹಾಗೂ ಬಿಬಿಎಂಪಿ ಆಯುಕ್ತರ ಅನುಮತಿ ಇಲ್ಲದೆ ಮಾಡಲು ಆಗುತ್ತದೆಯೇ? ಎಂದು ಪ್ರಶ್ನಿಸಿದರು.

32 ದೇಶಗಳ 4.52 ಲಕ್ಷ ಜನ ಭಾಗಿ | ಸಾಮಾಜಿಕ ಮಾಧ್ಯಮಗಳ ಮೂಲಕ 4.99 ಕೋಟಿ ಜನರನ್ನು ತಲುಪಿದ ಸಮಾವೇಶ

5 ಹೆಗ್ಗುರಿಗಳೊಂದಿಗೆ ತಂತ್ರಜ್ಞಾನ ಸಮಾವೇಶಕ್ಕೆ ತೆರೆ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸ್ಟಾರ್ಟಪ್ ಪಾರ್ಕ್, 50 ಕಾಲೇಜುಗಳಲ್ಲಿ ಆಧುನಿಕ ತಾಂತ್ರಿಕ ಪ್ರಯೋಗಾಲಯಗಳು, ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ಕೇಂದ್ರಗಳ ಆರಂಭ, ಶಿಕ್ಷಣ ಸಂಸ್ಥೆಗಳು ಮತ್ತು ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಕಂಪನಿಗಳ ನಡುವೆ ಗಾಢ ಸಂಬಂಧ ಮತ್ತು ಶೈಕ್ಷಣಿಕ ಸಂಸ್ಥೆಗಳು ಹಾಗೂ ಸಂಶೋಧನಾ ಸಂಸ್ಥೆಗಳ ನಡುವೆ ನಿಕಟ ಬಾಂಧವ್ಯ ಎಂಬ ಐದು ಹೆಗ್ಗುರಿಗಳ ಘೋಷಣೆಗಳೊಂದಿಗೆ 25ನೇ ವರ್ಷದ ಪ್ರತಿಷ್ಠಿತ ಬೆಂಗಳೂರು ತಂತ್ರಜ್ಞಾನ ಸಮಾವೇಶಕ್ಕೆ ಶುಕ್ರವಾರ ತೆರೆ ಬಿದ್ದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಸಮ್ಮುಖದಲ್ಲಿ ಐಟಿ-ಬಿಟಿ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಅವರು ಸರಕಾರದ ಪರವಾಗಿ ಸಮಾರೋಪ ಸಮಾರಂಭವನ್ನು ಘೋಷಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಒಟ್ಟು 32 ದೇಶಗಳು ಪಾಲ್ಗೊಂಡಿದ್ದ ಸಮಾವೇಶದಲ್ಲಿ 4.52 ಲಕ್ಷ ಜನ ಸಕ್ರಿಯವಾಗಿ ಪಾಲ್ಗೊಂಡಿದ್ದು, ವಿವಿಧ ಸಾಮಾಜಿಕ ಮಾಧ್ಯಮಗಳ ಮೂಲಕ 4.99 ಕೋಟಿ ಜನರನ್ನು ತಲುಪಿದೆ. ಪ್ರದರ್ಶನ ಮಳಿಗೆಗಳಿಗೆ 50 ಸಾವಿರ ಜನರು ಭೇಟಿ ನೀಡಿದ್ದು, 26 ಸಾವಿರ ನೋಂದಾಯಿತ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಜತೆಗೆ ವಿವಿಧ ನವೋದ್ಯಮಗಳ 28 ನೂತನ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು. ಸ್ಟಾರ್ಟ್ ಅಪ್ ವಿಷನ್ ಗುಂಪಿನ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ಐಟಿಬಿಟಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ. ಇ.ವಿ.ರಮಣ ರೆಡ್ಡಿ, ಐಟಿಬಿಟಿ ಇಲಾಖೆ ನಿರ್ದೇಶಕಿ ಮೀನಾ ನಾಗರಾಜ್ ಉಪಸ್ಥಿತರಿದ್ದರು.

OPEN FINANCIA TECHNOLO

ಅರಮನೆ ಆವರಣದಲ್ಲಿ ಮೂರು ದಿನಗಳ ಬೆಂಗಳೂರು ತಂತ್ರಜ್ಞಾನ ಶೃಂಗದ ಸಮಾರೋಪ ಸಮಾರಂಭದಲ್ಲಿ ಯೂನಿಕಾರ್ನ್ ಮುಖ್ಯಸ್ಥರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿದರು. ಕೇಂದ್ರ ಸಚಿವ ಪಿಯೂಷ್ ಗೋಯಲ್, ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಇದ್ದರು.

> ಮೂರು ದೇಶಗಳ ಉನ್ನತ ಮಟ್ಟದ ಸಚಿವರ ನಿಯೋಗಗಳು ಮತ್ತು ಒಂಬತ್ತು ರಾಷ್ಟ್ರಗಳ ಉನ್ನತ ನಿಯೋಗಗಳು ಸಮಾವೇಶದಲ್ಲಿ ರಾಜ್ಯ ಸರಕಾರದೊಂದಿಗೆ ಮಾತುಕತೆ ನಡೆಸಿದ್ದು, ಹೂಡಿಕೆಗೆ ಆಸಕ್ತಿ ವ್ಯಕ್ತಪಡಿಸಿವೆ. ಇದಲ್ಲದೆ, ಒಟ್ಟು 12 ಒಡಂಬಡಿಕೆಗಳಿಗೆ ಸಮಾವೇಶದಲ್ಲಿ ಅಂಕಿತ ಹಾಕಲಾಗಿದೆ.
>
> -ಡಾ.ಸಿ ಎನ್ ಅಶ್ವತ್ಥನಾರಾಯಣ, ಐಟಿ-ಬಿಟಿ ಸಚಿವ

ದೇಶದ ಆರ್ಥಿಕತೆಯ ರಾಜಧಾನಿ ಸಿಲಿಕಾನ್ ಸಿಟಿ ಬೆಂಗಳೂರು

ರಾಜಧಾನಿ ಬೆಂಗಳೂರು ಕೇವಲ ತಂತ್ರಜ್ಞಾನದ ನಗರವಾಗಿರದೇ, ಮುಂದಿನ 5 ವರ್ಷಗಳಲ್ಲಿ ದೇಶದ ಆರ್ಥಿಕತೆಯ ರಾಜಧಾನಿಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ತಂತ್ರಜ್ಞಾನ ಸಮಾವೇಶದ ಸಮಾರೋಪದಲ್ಲಿ ಯೂನಿಕಾರ್ನ್‌ಗಳ ಅಭಿನಂದನೆ ಹಾಗೂ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಕರ್ನಾಟಕ ವಿದೇಶಿ ಬಂಡವಾಳ ಹೂಡಿಕೆ ಹಾಗೂ ಸ್ಟಾರ್ಟ್ ಅಪ್ ಗಳಲ್ಲಿ ಉತ್ತಮ ಸ್ಥಾನದಲ್ಲಿದೆ. ಬಿಯಾಂಡ್ ಬೆಂಗಳೂರು ಅಭಿವೃದ್ಧಿಯಾಗಬೇಕು. ಕೃಷಿ, ತಂತ್ರಜ್ಞಾನ, ಆರ್ಥಿಕತೆ ಹೀಗೆ ಎಲ್ಲ ರಂಗಗಳಲ್ಲಿಯೂ ಕರ್ನಾಟಕ ಹಾಗೂ ಬೆಂಗಳೂರು ಅತ್ಯುತ್ತಮ ಶ್ರೇಯಾಂಕ ಹೊಂದಿದೆ. ಇದರಿಂದಾಗಿ ನಮ್ಮ ಜವಾಬ್ದಾರಿಯೂ ಹೆಚ್ಚಿದೆ ಎಂದರು. ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವುದರ ಜತೆಗೆ ಪ್ರಥಮ ಸ್ಥಾನವನ್ನು ಕಾಯ್ದಿರಿಸಿಕೊಂಡಿರುವುದು ಸವಾಲಿನ ಕೆಲಸವಾಗಿದ್ದು, ಇದಕ್ಕಾಗಿ ದೊಡ್ಡ ಪ್ರಮಾಣದ ಪರಿಶ್ರಮ ಬೇಕಾಗಿದೆ. ಈ ನಿಟ್ಟಿನಲ್ಲಿ ನಾಡಿನ ಎಂಜಿನಿಯರ್ಸ್ ಹಾಗೂ ವಿಜ್ಞಾನಿಗಳು ಹಾಗೂ ಅವರ ಪರಿಶ್ರಮದ ಮೇಲೆ ನನಗೆ ಸಂಪೂರ್ಣ ನಂಬಿಕೆಯಿದೆ. ಆಧುನಿಕ ತಂತ್ರಜ್ಞಾನ ಮಾನವನ ಒಳಿತಿಗೆ ಹಾಗೂ ಉತ್ತಮ ಸಮಾಜ ನಿರ್ಮಾಣಕ್ಕೆ ಬಳಕೆಯಾಗಬೇಕು ಎಂದು ಹೇಳಿದರು.

2047ಕ್ಕೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆ

ದೇಶದ ತಂತ್ರಜ್ಞಾನದ ರಾಜಧಾನಿಯಾಗಿರುವ ಬೆಂಗಳೂರು ಸಹಭಾಗಿತ್ವ, ಸಹಕಾರ ಮತ್ತು ಸ್ಪರ್ಧೆಗಳಿಂದ ಜಾಗತಿಕ ಮಟ್ಟದಲ್ಲಿ ವಿರಾಜಮಾನವಾಗಿದೆ. ಭಾರತವು ಮುಂದಿನ 25 ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿದ್ದು, 30 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಕೇಂದ್ರ ಸರಕಾರವು ದೊಡ್ಡ ಉದ್ಯಮಿಗಳಂತೆಯೇ ಸಣ್ಣಪುಟ್ಟ ವ್ಯಾಪಾರಿಗಳಿಗೂ ಸಮಾನ ಅವಕಾಶ ಕಲ್ಪಿಸುವ ಉದ್ದೇಶದಿಂದ ಓಪನ್ ಡೇಟಾ ಇ-ಕಾಮರ್ಸ್ ವ್ಯವಸ್ಥೆಗೆ ಚಾಲನೆ ನೀಡಿದ್ದು, ಇದೂ ಸಹ ಬೆಂಗಳೂರಿನಿಂದಲೇ ಆರಂಭವಾಗಬೇಕು ಎಂದು ಆಶಿಸಿದರು.

ನಗರದಲ್ಲಿ 2041ರ ಹೊತ್ತಿಗೆ ಒಟ್ಟು 314 ಕಿ.ಮೀ. ಸಂಚಾರಕ್ಕೆ ಸಿದ್ಧ

2025ರ ವೇಳೆ 175 ಕಿಮೀ ಮೆಟ್ರೋ ಮಾರ್ಗ

ಬೆಂಗಳೂರು: ಮೆಟ್ರೋ ರೈಲು ವ್ಯವಸ್ಥೆಯು ಸುಗಮ ಸಂಚಾರವನ್ನು ಸಾಧ್ಯವಾಗಿಸುತ್ತಿದ್ದು, 2025ರ ಜೂನ್ ಹೊತ್ತಿಗೆ 'ನಮ್ಮ ಮೆಟ್ರೋ' ಜಾಲದಲ್ಲಿ 175 ಕಿ.ಮೀ. ಉದ್ದದ ಮಾರ್ಗ ಸಿದ್ಧವಾಗಲಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಹೇಳಿದ್ದಾರೆ.

ಬೆಂಗಳೂರು ತಂತ್ರಜ್ಞಾನ ಸಮಾವೇಶದಲ್ಲಿ 'ಸಂಚಾರ ವ್ಯವಸ್ಥೆಯ ಭವಿಷ್ಯ' ವಿಚಾರಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಮೆಟ್ರೋದ 2 ಮತ್ತು 3ನೇ ಹಂತದ ಕಾಮಗಾರಿಗಳು ಸಂಪೂರ್ಣವಾಗಿ ಮುಗಿದರೆ, ನಗರದಲ್ಲಿ 2041ರ ಹೊತ್ತಿಗೆ ಒಟ್ಟು 314 ಕಿ.ಮೀ. ಉದ್ದದ ಮೆಟ್ರೋ ಮಾರ್ಗ ಸಿದ್ಧವಾಗಲಿದೆ. ಸದ್ಯಕ್ಕೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆ ಮೆಟ್ರೋ ಕಾಮಗಾರಿ ಭರದಿಂದ ಸಾಗುತ್ತಿದೆ. ಆದರೆ, ಸ್ವಂತ ವಾಹನಗಳನ್ನು ಬಿಟ್ಟು ಸಾರ್ವಜನಿಕ ಸಾರಿಗೆಯ ಕಡೆಗೆ ಜನರನ್ನು ಕರೆತರುವುದೇ ದೊಡ್ಡ ಸವಾಲಾಗಿದೆ ಎಂದು ಪ್ರತಿಪಾದಿಸಿದರು.

1990ರವರೆಗೂ ದೇಶದಲ್ಲಿ ನಗರ ಪ್ರದೇಶಗಳ ಕಡೆಗೆ ಗಮನವನ್ನೇ ಕೊಡುತ್ತಿರಲಿಲ್ಲ. ಹೀಗಾಗಿ ನಮ್ಮ ನಗರಾಭಿವೃದ್ಧಿ ಯೋಜನೆಗಳು ಬಹುಕಾಲ ವೈಜ್ಞಾನಿಕವಾಗಿರಲಿಲ್ಲ. ಈಗ ನವೋದ್ಯಮಗಳಿಂದ ಮೆಟ್ರೋ ವ್ಯವಸ್ಥೆಗೆ ಸಾಕಷ್ಟು ಅನುಕೂಲಗಳು ಸಿಗುತ್ತಿವೆ. ಹೀಗಾಗಿ ಜನರು ಮೆಟ್ರೋ ರೈಲುಗಳ ಮೂಲಕ ತಮ್ಮ ಕಾರ್ಯಸ್ಥಳಗಳನ್ನು ತಲುಪುವಂತೆ ಮಾಡಲು ಹಲವು ನವೋದ್ಯಮಗಳೊಂದಿಗೆ ಬಿಎಂಆರ್‌ಸಿಎಲ್ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿದೆ ಎಂದು ವಿವರಿಸಿದರು.

ಅಂತಾರಾಷ್ಟ್ರೀಯ ಸಾರಿಗೆ ಕೌನ್ಸಿಲ್‌ನ ಅಮಿತ್ ಭಟ್ ಮಾತನಾಡಿ, ಪಾಶ್ಚಾತ್ಯ ಜಗತ್ತಿನಲ್ಲಿ ಶೇ.85ರಷ್ಟು ನಗರೀಕರಣವಾಗಿದ್ದು, ಭಾರತದಲ್ಲಿ ಈ ಪ್ರಮಾಣ ಶೇ.33ರಷ್ಟಿದೆ. ಆದರೆ ನಮ್ಮಲ್ಲಿ ಇನ್ನೂ ಶೇ.66ರಷ್ಟು ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಏಕೆಂದರೆ, ನಮ್ಮಲ್ಲಿ ಹೊಸದಾಗಿ ಹಲವು ನಗರಗಳು ತಲೆ ಎತ್ತುತ್ತಿವೆ ಎಂದರು.

ಬಾಶ್ ಕಂಪನಿಯ ಉಪಾಧ್ಯಕ್ಷ ವಾದಿರಾಜ್ ಕೃಷ್ಣಮೂರ್ತಿ, ಚಲೋ ಕಂಪನಿಯ ಸಹ ಸಂಸ್ಥಾಪಕ ವಿನಾಯಕ್ ಭಾವ್ನಾನಿ ಅವರು ಕೂಡ ಗೋಷ್ಠಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದರು.

> ಮೆಟ್ರೋ ನಿಲ್ದಾಣಗಳಲ್ಲೇ ಬಸ್ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸುವಂತೆ ಬಿಎಂಟಿಸಿ ಜತೆ ಮಾತುಕತೆ ಪ್ರಗತಿಯಲ್ಲಿದೆ. ಇದರಿಂದ ಆ ಸಂಸ್ಥೆಗೂ ಲಾಭವಾಗಲಿದೆ. ಇದರ ಜತೆಗೆ ಕಾರ್ ಮತ್ತು ಬೈಕ್ ಪೂಲಿಂಗ್ ವ್ಯವಸ್ಥೆಯನ್ನು ಉತ್ತೇಜಿಸಬೇಕು. ಅಲ್ಲದೆ, ಮೆಟ್ರೋ ನಿಲ್ದಾಣಗಳ ಒಳಗೆ ಮತ್ತು ಹೊರಗೆ ಸಾರ್ವಜನಿಕರಿಗೆ ಪ್ರತಿಯೊಂದೂ ಸಿಗುವಂತಿರಬೇಕು. ಇದನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಸಂಸ್ಥೆಯು ಯೋಚಿಸುತ್ತಿದೆ .
>
> - ಅಂಜುಂ ಪರ್ವೇಜ್ , ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಇಂಡಿಯನ್ ಬ್ಯಾಂಕ್‌ನಿಂದ ನೂತನ ಯೋಜನೆ

ಬೆಂಗಳೂರು: ಇಂಡಿಯನ್ ಬ್ಯಾಂಕ್‌ನ ಯೋಜನೆಗಳು ಹಾಗೂ ಹಣಕಾಸು ಸ್ಥಿತಿಗತಿಗಳ ಕುರಿತು ಪುರಭವನದಲ್ಲಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಕಾರ್ಯನಿರ್ವಹಣಾಧಿಕಾರಿ ಎಸ್.ಎಲ್.ಜೈನ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಬ್ಯಾಂಕ್‌ನ ವಲಯ ಪ್ರಧಾನ ವ್ಯವಸ್ಥಾಪಕ ಸುಧೀರ್ ಕುಮಾರ್ ಗುಪ್ತಾ, ಸಿಡಿಒ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಧನರಾಜ್, ಸಿಸಿಒ ವಿಭಾಗದ ವ್ಯವಸ್ಥಾಪಕ ಎಸ್.ಸುರೇಶ್ ಕುಮಾರ್ ಸಭೆಯಲ್ಲಿ ಹಾಜರಿದ್ದರು. ಗ್ರಾಹಕರು ಮತ್ತು ವ್ಯವಹಾರದ ಬೆಳವಣಿಗೆಯ ಮೇಲೆ ಕೇಂದ್ರೀಕರಿಸುವ ಉದ್ದೇಶದಿಂದ ಇಂಡಿಯನ್ ಬ್ಯಾಂಕ್ ವತಿಯಿಂದ ಪ್ರಾಜೆಕ್ಟ್ ಇಂಡ್ ಪ್ರೈಡ್ ಮತ್ತು ಪ್ರಾಜೆಕ್ಟ್ ವೇವ್ ಅನ್ನು ಪ್ರಾರಂಭಿಸಲಾಗಿದೆ. ಬೆಂಗಳೂರು ವಲಯದಲ್ಲಿ ಕಾರ್ಯನಿರ್ವ ಹಿಸುತ್ತಿರುವ 250 ಅಧಿಕಾರಿಗಳು ಮತ್ತು ಕೇರಳ ಮತ್ತು ಕರ್ನಾಟಕದ 5 ವಲಯಗಳ ವ್ಯವಸ್ಥಾಪಕರು ಮತ್ತು ಉಪವಲಯ ವ್ಯವಸ್ಥಾಪಕರು ಭಾಗವಹಿಸಿದ್ದರು.

ಪುರಭವನದಲ್ಲಿ ನಡೆದ ಸಭೆಯ ಕುರಿತು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಕಾರ್ಯನಿರ್ವಣಾಧಿಕಾರಿ ಎಸ್.ಎಲ್.ಜೈನ್ ಮಾತನಾಡಿದರು.

ಕೇಂದ್ರ ಕೌಶಲಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ಪ್ರಗತಿ ಮೈದಾನದಲ್ಲಿ ನಡೆಯುತ್ತಿರುವ ಇಂಡಿಯಾ-ಇಂಟರ್‌ನ್ಯಾಷನಲ್ ವ್ಯಾಪಾರ ಮೇಳದ ಕರ್ನಾಟಕ ಪೆವಿಲಿಯನ್‌ಗೆ ಭೇಟಿ ನೀಡಿದರು.

ಕುಶಲಕರ್ಮಿಗಳನ್ನು ಬೆಂಬಲಿಸಿ, ಪ್ರೋತ್ಸಾಹಿಸಿ

ದೆಹಲಿ: ಕೇಂದ್ರ, ಕೌಶಲಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ಪ್ರಗತಿ ಮೈದಾನದಲ್ಲಿ ನಡೆಯುತ್ತಿರುವ ಇಂಡಿಯಾ-ಇಂಟರ್‌ನ್ಯಾಷನಲ್ ವ್ಯಾಪಾರ ಮೇಳದ ಕರ್ನಾಟಕ ಪೆವಿಲಿಯನ್‌ಗೆ ಭೇಟಿ ನೀಡಿದರು.

ಪೆವಿಲಿಯನ್‌ನಲ್ಲಿ ಹಾಕಲಾಗಿದ್ದ ಮಳಿಗೆಗಳನ್ನು ಒಂದು ಸುತ್ತು ಹಾಕಿದ ಅವರು, ಸ್ಟಾಲ್‌ಗಳಲ್ಲಿರುವ ಕುಶಲಕರ್ಮಿಗಳೊಂದಿಗೆ ಸಂವಾದ ನಡೆಸಿದರು. ಚನ್ನಪಟ್ಟಣ ಟಾಯ್ ಕ್ಲಸ್ಟರ್ ಮತ್ತು ಮೈಸೂರು ರಸ್ತೆಯ ಮರದ ಕಲಾಶಾಲೆಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು. ಬಳಿಕ ಮಾತನಾಡಿ, ಕರ್ನಾಟಕ ಪೆವಿಲಿಯನ್‌ಗೆ ಭೇಟಿ ನೀಡಲು ನನಗೆ ಹೆಮ್ಮೆಯಾಗುತ್ತಿದೆ. ಉದ್ಯಮಶೀಲತೆ ಮತ್ತು ಸೃಜನಶೀಲತೆಯ ಈ ವೈವಿಧ್ಯಮಯ ಪ್ರದರ್ಶನದಿಂದ ಪ್ರಭಾವಿತನಾಗಿದ್ದೇನೆ. ಎಲ್ಲರೂ ಈ ಮಂಟಪಕ್ಕೆ ಭೇಟಿ ನೀಡಿ ಕುಶಲಕರ್ಮಿಗಳನ್ನು ಬೆಂಬಲಿಸಿ, ಪ್ರೋತ್ಸಾಹಿಸಬೇಕೆಂದು ಕರೆ ನೀಡಿದರು.

OMKARA ASSETS RECONSTRUCTION Pvt. Ltd.
ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
CIN: U67100TZ2014PTC020363,
ಕಾರ್ಪೊರೇಟ್ ಕಛೇರಿ: ಸಿ/515, ಕನಕಿಯ ಝಿಲ್ಲಾನ್, ಎಲ್‌ಬಿಎಸ್ ಮತ್ತು ಸಿಎಸ್‌ಟಿ ರಸ್ತೆ ಜಂಕ್ಷನ್, ಬಿಕೆಸಿ ಅನೆಕ್ಸ್ ಇತ್ತಿನಾಕ್ಸ್, ಕುರ್ಲಾ (ಪಶ್ಚಿಮ), ಮುಂಬಯಿ-400070. ದೂ: 7558392736 ಇ-ಮೇಲ್: mumbai@omkaraarc.com

[ಅಪೆಂಡಿಕ್ಸ್ -IV-A] [ಪ್ರೊವಿಸೊ ನಿಯಮ 8 (6)]
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002ನ್ನು ಓದಿಕೊಂಡಂತೆ ನಿಯಮ 8(6)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ, 2002 ರ ("ಸರ್ಫೇಸಿ ಕಾಯಿದೆ") ಅನ್ವಯ
ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ಪ್ರಕಟಣೆ

ಸಾರ್ವಜನಿಕರಿಗೆ ಸಾಲಗಾರರಿಗೆ ಮತ್ತು ಅಡಮಾನದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಪೂರಕ ಭದ್ರತಾದಾರರಾದ ಆಂಧ್ರ ಬ್ಯಾಂಕ್ (ಈಗ ಯೂನಿಯನ್ ಬ್ಯಾಂಕ್ ಆಫ್ ಇಂಡಿಯ ಜೊತೆ ಸಂಯೋಗಗೊಂಡಿದೆ) ಇಲ್ಲಿಗೆ ಅಡಮಾನ ಮಾಡಿದ್ದು, ಸರ್ಫೇಸಿ ಕಾಯಿದ ಅನ್ವಯ ಮತ್ತು ಭದ್ರತಾ ಜಾರಿ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅಡಿ 14.10.2010ರಂದು ಸೆಕ್ಷನ್ 13(2)ರ ಅನ್ವಯ ಸಾಲಗಾರರು / ಜಾಮೀನುದಾರರು/ಅಡಮಾನದಾರರಾದ ಮೆ॥ ಎಸ್‌ಎಸ್‌ಎ ಕನ್‌ಸ್ಟ್ರಕ್ಷನ್ಸ್, ಮೆ॥ ಗೋಪಾಲ್ ರೆಡ್ಡಿ ಅಸೋಸಿಯೇಟ್ಸ್, ಶ್ರೀ ಜಿ ಗೋಪಾಲ್ ರೆಡ್ಡಿ, ಶ್ರೀಮತಿ ಜಿ ರಾಜೇಶ್ವರಿ, ಶ್ರೀ ಜಿ ವಿ ಜಯಕಾಂತ್ ರೆಡ್ಡಿ, ಶ್ರೀ ಜಿ ಶ್ರೀಕಾಂತ್ ರೆಡ್ಡಿ, ಶ್ರೀ ಮಲ್ಲಿಕಾರ್ಜುನ ರೆಡ್ಡಿ, ಶ್ರೀಮತಿ ಯಶೋದಮ್ಮ, ಶ್ರೀಮತಿ ಪ್ರಸೂನಮ್ಮ, ಶ್ರೀ ವೈ ಸತೀಶ್ ಕುಮಾರ್ ರೆಡ್ಡಿ, ಶ್ರೀಡಿ ವೆಂಕು ರೆಡ್ಡಿ, ಶ್ರೀ ಡಿ ರಘುರಾಮ್ ರೆಡ್ಡಿ, ಶ್ರೀಮತಿ ದೇವಿರೆಡ್ಡಿ ಭುಜಮ್ಮ ಇವರುಗಳಿಂದ ದಿನಾಂಕ 29.09.2010ರವರೆಗೆ ಬರಬೇಕಾದ ಬಾಕಿ ಹಣ ರೂ.6,05,26,460/- (ಆರು ಕೋಟಿ ಐದು ಲಕ್ಷ ಇಪ್ಪತ್ತಾರು ಸಾವಿರದ ನಾನ್ನೂರ ಅರುವತ್ತು ರೂಪಾಯಿಗಳು ಮಾತ್ರ) ವನ್ನುನೋಟೀಸ್ ನೀಡಿ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ತಗಾದೆ ಸೂಚನೆಯನ್ನು ನೀಡಿದ್ದರು. ಸಾಲಗಾರರು/ ಜಾಮೀನುದಾರರು/ ಅಡಮಾನದಾರರು ತಗಾದೆ ಸೂಚನೆ ನೀಡಿದ 60 ದಿಗಳ ಒಳಗೆ ಬಾಕಿ ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಆಂಧ್ರ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು (ಈಗ ಯೂನಿಯನ್ ಬ್ಯಾಂಕ್ ಆಫ್ ಇಂಡಿಯ ಜೊತೆ ಸಂಯೋಗಗೊಂಡಿದೆ) ಸೆಕ್ಷನ್ 13(4) ರ ಸರ್ಫೇಸಿ ಕಾಯಿದೆ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅಡಿ ಈ ಕೆಳಗೆ ವಿವರಿಸಿರುವ ಸ್ವತ್ತುಗಳನ್ನು 21.05.2011ರಂದು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದರು.

ಮುಂದುವರಿದು, ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈ/ಲಿ., (ಓಂಕಾರ ಎಆರ್‌ಸಿ ಆಕ್ಟಿಂಗ್ ಇನ್ ಕೆಪಾಸಿಟಿ ಆಫ್ ಓಂಕಾರ ಪಿಎಸ್22/2020-21 ಟ್ರಸ್ಟ್) ಆಂಧ್ರ ಬ್ಯಾಂಕ್ (ಈಗ ಯೂನಿಯನ್ ಬ್ಯಾಂಕ್ ಆಫ್ ಇಂಡಿಯ ಜೊತೆ ಸಂಯೋಗಗೊಂಡಿದೆ) ನಿಂದ ಸಾಲಗಾರರ/ಜಾಮೀನುದಾರರ/ಅಡಮಾನದಾರರ ಅಸೈನ್‌ಮೆಂಟ್ ಒಪ್ಪಂದ ದಿನಾಂಕ 30.06.2017ರಂದು ಸಂಪೂರ್ಣ ಹೊಣೆಗಾರಿಕೆ ಮತ್ತು ಬಾಧ್ಯತೆಗಳನ್ನು ಸ್ವಾಧಿನಪಡಿಸಿಕೊಂಡಿದ್ದು, ಜೊತೆಗೆ ಅಸೈನ್‌ರವರಿಂದ ಭದ್ರತೆಯನ್ನು ಪಡೆದುಕೊಂಡಿದೆ. ಅದರಂತೆ, ಒಎಆರ್‌ಪಿಎಲ್ ಅಸೈನರ್ ಮತ್ತು ಎಂಪವರ್‌ನ್ನು ಬಾಕಿ ವಸೂಲಿಗಾಗಿ ಬಳಸಿಕೊಳ್ಳಲಿದೆ.

ಆದುದರಿಂದ ಅಧಿಕೃತ ಅಧಿಕಾರಿಗಳು ಒಎಆರ್‌ಪಿಎಲ್ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಬಾಕಿ ವಸೂಲಿಗಾಗಿ ಮಾರಾಟ ಮಾಡಲು ನಿರ್ಧರಿಸಿದೆ. ಆಸ್ತಿಗಳನ್ನು ಸೆಕ್ಷನ್ 13(2) ಮತ್ತು (4) ರ ಸರ್ಫೇಸಿ ಕಾಯಿದೆ ಅನ್ವಯ "ಎಲ್ಲಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಹೇಗಿದೆಯೋ ಹಾಗೆ" ಆಯಾ ಅಂಕಣದಲ್ಲಿ ಹೆಸರಿಸಿರುವ ಮೊತ್ತದಂತೆ ಪೂರಕ ಭದ್ರತಾದಾರರಾದ ಒಎಆರ್‌ಪಿಎಲ್ ಇವರಿಗೆ ಸಾಲಗಾರರು ಮತ್ತು ಸಹಸಾಲಗಾರರಿಂದ ಬರಬೇಕಾದ ಬಾಕಿ ಮೊತ್ತಕ್ಕಾಗಿ ಮಾರಾಟ ಮಾಡಲಿರುವರು. ಸ್ಥಿರಾಸ್ತಿಯ ವಿವರ ಜೊತೆಗೆ ಮೀಸಲು ಬೆಲೆ ಮತ್ತು ಅರ್ನೆಸ್ಟ್ ಠೇವಣಿ (ಇಎಂಡಿ) ಮತ್ತು ಪರಭಾರೆಯನ್ನು ಸಹ ಈ ಕೆಳಗೆ ನಮೂದಿಸಲಾಗಿದೆ.

ಆಸ್ತಿಯ ವಿವರ	ಇಎಂಡಿ	ಮೀಸಲು ಬೆಲೆ
ಪ್ಲಾಟ್ ನಂ.8, ಸರ್ವೆ ನಂ. 74/1 ರಲ್ಲಿದ್ದು, ಲೇಔಟ್ ಪಡಾರುಪಳ್ಳಿ ಪ್ರದೇಶದಲ್ಲಿದ್ದು, ನೆಲ್ಲೂರು ಮುನ್ಸಿಪಾಲಿಟಿ, ನೆಲ್ಲೂರು ಉಪ ನೋಂದಣಾಧಿಕಾರಿ ವ್ಯಾಪ್ತಿಯಲ್ಲಿದ್ದು, ವಿಸ್ತೀರ್ಣ 50 ಅಂಕಣಾಸ್ ಅಥವಾ 334-450 ಚದರ ಮೀಟರ್ (ಬ್ಲಾಕ್ ನಂ. 5), ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ. 5, ಪಶ್ಚಿಮಕ್ಕೆ: ಲೇಔಟ್ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ. 9, ದಕ್ಷಿಣಕ್ಕೆ: ಪ್ಲಾಟ್ ನಂ. 7. ಗೂಗಲ್ ಲೊಕೇಶನ್ :Plot No. 7. Google Location: - 14°23'29.2"N 79°56'51.4"E	ರೂ. 3,40,000/-	ರೂ. 34,00,000/-

ಇ-ಹರಾಜಿನ ದಿನಾಂಕ	20.12.2022 (ಮಂಗಳವಾರ) ಬೆಳಗ್ಗೆ 11.00ರಿಂದ 12.00 ಗಂಟೆ
ಕನಿಷ್ಠ ಬಿಡ್ ಹೆಚ್ಚಳ ಮೌಲ್ಯ	ರೂ.1,00,000/- (ಒಂದು ಲಕ್ಷ ರೂಪಾಯಿಗಳು ಮಾತ್ರ)
ಆಸ್ತಿಯ ಪರಿವೀಕ್ಷಣೆ	ದಿನಾಂಕ: 08.12.2022, ಗುರುವಾರ, ಸಮಯ: ಮಧ್ಯಾಹ್ನ 2.00 ರಿಂದ 3.00ಗಂಟೆ
ಭಾಗವಹಿಸುವಿಕೆಗೆ ಬಿಡ್ ಪತ್ರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ / ಕೆವೈಸಿ ದಾಖಲೆ/ಇಎಂಡಿ ಪುರಾವೆ	19.12.2022, ಸೋಮವಾರ, ಸಮಯ: ಸಂಜೆ 6.00 ಗಂಟೆ

ಅಧಿಕೃತ ಅಧಿಕಾರಿಗಳಿಗೆ ತಿಳಿದಂತೆ ಮೇಲಿನ ಆಸ್ತಿಗಳಿಗೆ ಯಾವುದೇ ಪರಭಾರೆ ಇರುವುದಿಲ್ಲ
ಹರಾಜನ್ನು ಒಎಆರ್‌ಪಿಎಲ್ ನಡೆಸಲಿದೆ. ಇಎಂಡಿ (ಡಿಡಿ/ಪೇ ಆರ್ಡರ್ ಮೂಲಕ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ) ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ http://omkaraarc.com/auction.php &/ಅಥವಾ https://www.bankeauctions.com ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ. ಆಸಕ್ತ ಬಿಡ್ಡುದಾರರು ಇಎಂಡಿ ಹಣವನ್ನು ಠೇವಣಿಯಾಗಿಟ್ಟು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಕ್ರಿಯೇಟ್ ಮಾಡಲು, ಡಾಟಾ ಅಪ್‌ಲೋಡ್ ಮಾಡುವುದು, ಬಿಡ್ ಸಲ್ಲಿಕೆ, ಇ-ಬಿಡ್ಡಿಂಗ್ ಪ್ರಕ್ರಿಯೆ ತರಬೇತಿ ಇತ್ಯಾದಿಗಳಿಗಾಗಿ ಇ-ಹರಾಜು ಸೇವಾ ಪೂರೈಕೆದಾರರಾದ ಮೆ॥ ಸಿ1ಇಂಡಿಯ ಪ್ರೈ. ಲಿ., ದೂ.ಸಹಾಯವಾಣಿ: +91 7291981124/25/26, ಇ-ಮೇಲ್: support@bankeauctions.com, ಶ್ರೀ ಹರೀಶ್ ಗೌಡ, ಮೊಬೈಲ್: 95945 97555, ಇ-ಮೇಲ್: hareesh.gowda@c1india.com ಸಂಪರ್ಕಿಸಿ ನೆರವನ್ನು ಪಡೆಯಬಹುದು. ಸಹಾಯವಾಣಿ ಇ-ಮೇಲ್ ಐಡಿ: support@bankeauctions.com, ಮತ್ತು ಯಾವುದೇ ಆಸ್ತಿ ಸಂಬಂಧಗಳಿಗೆ ಅಧಿಕೃತ ಅಧಿಕಾರಿ ಶ್ರೀ ಶುಭೋದೀಪ್ ಬ್ಯಾನರ್ಜಿ, ಮೊ: +917558392736, ಮೇಲ್: s.banerje@omkarkaraarc.com ಸಂಪರ್ಕಿಸಿ.

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8(6) ನ್ನು ಓದಿಕೊಂಡಂತೆ ಮಾರಾಟಕ್ಕೆ ಶಾಸನಬದ್ಧ ಸೂಚನೆ

ಇದು ಸಾಲಗಾರರಿಗೆ ನಿಯಮ 8(6) ರ ಅಡಿ 9(1) ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ಮತ್ತು ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ ಅಡಿ ನೀಡಿದ ಮೇಲಿನ ಸಾಲದ 30 ದಿನಗಳ ಕಡ್ಡಾಯ ಸೂಚನೆಯಾಗಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಈ ಮೂಲಕ ಸೂಚಿಸುವುದೇನೆಂದರೆ ಹರಾಜು/ಮಾರಾಟವನ್ನು ಇ-ಹರಾಜು ಮೂಲಕ ಈ ಮೇಲೆ ಹೆಸರಿಸಿದ ದಿನಾಂಕ ಮತ್ತು ಸಮಯದಂದು ನಡೆಸಲಾಗುವುದು ಮತ್ತು ನಿಮಗೆ ಸಲಹೆ ನೀಡುವುದೇನೆಂದರೆ, ಲಭ್ಯವಿರುವ ಸಮಯಾವಕಾಶದಲ್ಲಿ ನೀವು ಇಚ್ಛಿಸಿದಲ್ಲಿ, ಮಾರಾಟ ಅಂತಿಮವಾಗುವ ಮೊದಲು ಬಾಕಿ ಇರುವ ಸಂಪೂರ್ಣ ಮೊತ್ತ ಹಾಗೂ ನಂತರದ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಿ ಸ್ವತ್ತುಗಳನ್ನು ಮರಳಿ ಪಡೆದುಕೊಳ್ಳಬಹುದು. ಒಂದು ವೇಳೆ ಪಾವತಿಸಲು ವಿಫಲವಾದಲ್ಲಿ, ಅಧಿಕೃತ ಅಧಿಕಾರಿ / ಪೂರಕ ಭದ್ರತಾದಾರರ ವಿವೇಚನೆಗೆ ಬಿಟ್ಟಂತೆ ನಿಯಮ 8(5)ರ ಅಡಿ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ ನಿಯಮ, 2002ರ ಅಡಿ ವಿಧಿಸಿದಂತೆ ಯಾವುದೇ ರೂಪದಲ್ಲಿ ಮಾರಾಟ ಮಾಡಲಿರುವರು.

ದಿನಾಂಕ: 19.11.2022
ಸ್ಥಳ: ಬೆಂಗಳೂರು

ಸಹಿ/-ಅಧಿಕೃತ ಅಧಿಕಾರಿ
ಓಂಕಾರ ಅಸೆಟ್ಸ್ ರಿಕನ್‌ಸ್ಟ್ರಕ್ಷನ್ ಪ್ರೈ ಲಿ.
(ಆಕ್ಟಿಂಗ್ ಇನ್ ಕೆಪಾಸಿಟಿ ಆಸ್ ಎ ಟ್ರಸ್ಟೀ ಆಫ್ ಓಂಕಾರ ಪಿಎಸ್01/2017-18 ಟ್ರಸ್ಟ್)

KAVVERI TELECOM PRODUCTS LIMITED
Reg. Off.: Plot No.31-36, 1st Floor, 1st Main 2nd Stage Arakere Mico Layout Bannerghatta Road, Bangalore Ka 560076,
CIN: L85110KA1996PLC019627, Website: http://www.kavveritelecoms.com
eMail: cskavveritelecomproducts@gmail.com, Tel.: +9180 41215999
EXTRACT OF UNAUDITED FINANCIAL RESULTS FOR THE QUARTER ENDED 30th September, 2022 (Rs. In Lakhs)

PARTICULARS	STANDALONE				CONSOLIDATED			
	Quarter ended 30.09.2022 (Unaudited)	Quarter ended 30.06.2022 (Unaudited)	Corresponding 3 months in the previous quarter ended on 30.09.2021 (Unaudited)	Year to date figures for year ended 31.03.2022 (Audited)	Quarter ended 30.09.2022 (Unaudited)	Quarter ended 30.06.2022 (Unaudited)	Corresponding 3 months in the previous quarter ended on 30.09.2021 (Unaudited)	Year to date figures for year ended 31.03.2022 (Audited)
Total income from operations	Nil	Nil	10.60	125.51	74.57	151.67	99.73	691.53
Net Profit / (Loss) for the period (before finance cost tax, exceptional and/ extraordinary Items)	(52.50)	(69.61)	(47.87)	(126.07)	(45.01)	(62.37)	(107.92)	(197.92)
Net Profit / (Loss) for the period before tax (after finance cost, Exceptional and/or Extraordinary items)	(52.52)	(69.62)	(389.00)	(1470.61)	(45.77)	(62.37)	(455.90)	(1546.94)
Net Profit / (Loss) for the period after tax (after Exceptional and/or Extraordinary items)	(52.52)	(86.50)	(454.24)	(1732.75)	(45.77)	(79.25)	(521.14)	(1809.08)
Total Comprehensive Income for the period [Comprising profit/ (loss) for the period (after tax) and Other Comprehensive Income (after tax)	(52.52)	(86.50)	(454.24)	(1732.75)	(45.77)	(79.25)	(521.14)	(1809.08)
Paid up Equity Share Capital (Face Value- Rs.10 per share)	2012.426	2012.426	2012.426	2012.426	2012.426	2012.426	2012.426	2012.426
Earnings Per Share Basic: Diluted:	(0.26) (0.26)	(0.43) (0.43)	(2.26) (2.26)	(8.61) (8.61)	(0.23) (0.23)	(0.39) (0.39)	(2.59) (2.59)	(7.59) (7.59)

Notes: 1) The above results have been reviewed by the Audit Committee. The Board of Directors at its meeting held on 14th November 2022 at 4.30 P.M. due to some un-avoidable circumstances the Board Meeting adjourned to 4.30 PM on 16th November, 2022 and concluded at 11.15 PM on 16th November 2022, and approved the above results.
Note: The above is an extract of the detailed format of Quarterly Financial Results filed with the Stock Exchange under Regulation 33 of the SEBI (Listing and Other Disclosure Requirements) Regulations, 2015. The full format of the Quarterly and Yearly Financial Results is available on the Stock Exchange website.

Place: Bangalore
Date: 18.11.2022

For Kavveri Telecom Products Limited
Sd/- Chennareddy Shivakumarreddy, Managing Director, DIN: 01189348